4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮೈಸೂರು ಮುಕ್ತ ವಿಶ್ವವಿದ್ಯಾಲಯದ ಕೆಲಸಗಾರರ ಸಮಸ್ಯೆ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ನಾನು ಮತ್ತು ಪುಟ್ಟೇಗೌಡರು ಒಂದು ವಿಷಯ ಪ್ರಸ್ತಾಪ ಮಾಡಲು ಮೂರು ದಿವಸಗಳಿಂದ ಮಾನ್ಯ ಮುಖ್ಯಮಂತ್ರಿಗಳನ್ನು ಕಾಯುತ್ತಿದ್ದೆವು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರತಕ್ಕ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಸ್ಪೀಕರ್ ಹತ್ತಿರ ಕೂಡ ಅನುಮತಿ ತೆಗೆದುಕೊಂಡಿದ್ದೇವೆ.

ಶ್ರೀ ನೆ.ಲ. ನರೇಂದ್ರಬಾಬು: ಸನ್ಮಾನ್ಯ ಅಧ್ಯಕ್ಷರೇ, ಇವತ್ತು ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಾರ್, ನಾನು ಮಾತನಾಡುವುದೋ ಬೇಡವೋ, ತಾವು ಏನೂ ಹೇಳಲಿಲ್ಲ.

ಉಪಾಧ್ಯಕ್ಷರು: ಅವರು ಮಾತನಾಡಲಿ. ಅವರು ಚರ್ಚೆ ಮಾಡುತ್ತಿದ್ದಾರೆ. ನಾಳೆ ಮತ್ತು ನಾಡಿದ್ದು ಮುಖ್ಯಮಂತ್ರಿಗಳು ಇರುತ್ತಾರೆ, ಆಗ ನೀವು ಮಾತನಾಡಿ. ಆಮೇಲೆ, ಅದನ್ನು ಕೇಳೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ನಾಲ್ಕು ದಿವಸಗಳಿಂದ ಕಾಯುತ್ತಿದ್ದೇವೆ ಸಾರ್.

ಉಪಾಧ್ಯಕ್ಷರು: ನರೇಂದ್ರಬಾಬುರವರೇ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆರು ತಿಂಗಳಿಂದ ಸುಮಾರು 350 ಜನ ಅಲ್ಲಿನ ಕೆಲಸಗಾರರು ಹೋರಾಟ ಮಾಡುತ್ತಿದ್ದಾರೆ. ಇಡೀ ವಿಶ್ವವಿದ್ಯಾನಿಲಯದ ಕೆಲಸ ಸ್ತಬ್ದ ಆಗಿದೆ. ಕಾರಣ ಏನೆಂದರೆ, ಅವರೆಲ್ಲರೂ ಕೂಡ ಟೆಂಪರರಿಯಾಗಿ ಕೆಲಸ ಮಾಡತಕ್ಕ ನೌಕರರು. ಅವರಿಗೆ ಕನಿಷ್ಟ ಸಂಬಳ ಕೊಡುತ್ತಿದ್ದಾರೆ. ಆ ಕನಿಷ್ಟ ಸಂಬಳದಲ್ಲಿ ಅವರು ಬದುಕುವುದಕ್ಕಾಗುವುದಿಲ್ಲವೆಂದು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನಲ್ಲಿ ಅವರಿಗೆ ಸಂಬಳ ಜಾಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವೇನೂ ಅವರಿಗೆ ಪರ್ಮನೆಂಟ್ ಮಾಡಬೇಕೆಂದು ಹೇಳಲಿಲ್ಲ ಅಥವಾ ಅವರಿಗೆ ಗ್ರೇಡೆಡ್ ಪೇ ಕೊಡಿ ಎಂದು ಹೇಳಲಿಲ್ಲ. ಬೇರೆ ಏನನ್ನೂ ಹೇಳಲಿಲ್ಲ. ಈಗ ಕೊಡುತ್ತಾ ಇರತಕ್ಕ ಸಂಬಳದಲ್ಲಿ ಅವರು ಬದುಕುವುದಕ್ಕೆ ಸಾಧ್ಯವಿಲ್ಲ. ಬದುಕುವುದಕ್ಕೆ ಬೇಕಾದ ಕನಿಷ್ಟ ಸಂಬಳವನ್ನು ಅವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ತೀರ್ಮಾನ ಮಾಡುವಾಗ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಬಿ.ಒ.ಎಂ. ಮೀಟಿಂಗ್‌ನಲ್ಲಿ ನಿರ್ಣಯ ಮಾಡಿದ್ದೇವೆ. ಇದಕ್ಕೆ ಸರ್ಕಾರ ಹಣ ಕೊಡಬೇಕಾಗಿಲ್ಲ. ನಮ್ಮ ಯೂನಿವರ್ಸಿಟಿಗೆ ಪ್ರತಿ ವರ್ಷ 4 ಕೋಟಿ

ರೂಪಾಯಿಗಳ ಬಡ್ಡಿ ಬರುತ್ತೆ. ಆ ಬಡ್ಡಿಯಲ್ಲಿ ಅವರಿಗೆ ಸಂಬಳ ಜಾಸ್ತಿ ಮಾಡಬೇಕೆಂದು ನಾವು ತೀರ್ಮಾನ ಮಾಡಿ, ಜಾರಿ ಮಾಡಬೇಕೆಂದು ತೀರ್ಮಾನ ಮಾಡಿದೆವು. ಓಪನ್ ಯೂನಿವರ್ಸಿಟಿ ಆಕ್ಟ್ ಪ್ರಕಾರ, ಬಿ.ಒ.ಎಂ. ಸುಪ್ರೀಂ ಅದು ತೀರ್ಮಾನ ಮಾಡಿದರೆ, ಜಾರಿಯಾಗಬೇಕು. ಆದರೆ, ಅಲ್ಲಿರತಕ್ಕ ವೈಸ್‌ಚಾನ್ಸಲರ್, ಹಿಂದೆ ಇದ್ದಂಥ ಒಬ್ಬರು ಕಾರ್ಯದರ್ಶಿಗಳು ಇವರೆಲ್ಲರೂ ಸೇರಿ, ಆ ಬಿ.ಒ.ಎಂ. ತೀರ್ಮಾನವನ್ನು ಜಾರಿ ಮಾಡದಹಾಗೆ sabatage ಮಾಡಿದ್ದಾರೆ. ಅಲ್ಲಿನ ನೌಕರರು ಕಳೆದ ಆರು ತಿಂಗಳಿಂದ ಅವರು ಹೋರಾಟ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ, ಶಿಕ್ಷಣ ಮಂತ್ರಿಗಳು ಇದ್ದಾರೋ ಅಥವ ಇಲ್ಲವೋ ಅಂತ ಗೊತ್ತಾಗುತ್ತಿಲ್ಲ. ಇವತ್ತಿಗೂ ಕೂಡ ಸರ್ಕಾರ ಅವರ ಬಗ್ಗೆ ಗಮನ ಕೊಟ್ಟಿಲ್ಲ. ಎಲ್ಲಾ ಮುಖ್ಯಮಂತ್ರಿಗಳಿಗೂ ಹೇಳಿದ್ದೇವೆ. ಎಲ್ಲಾ ಶಿಕ್ಷಣ ಸಚಿವರಿಗೂ ಹೇಳಿದ್ದೇವೆ. ಎಲ್ಲರಿಗೂ ಅರ್ಜಿ ಕೊಟ್ಟಿದ್ದೇವೆ. 38 ಜನ ಶಾಸಕರು ರಾಜ್ಯಪಾಲರಿಗೆ ಪತ್ರ ಬರೆದೆವು. ಈ ಯುನಿವರ್ಸಿಟಿ ಇಷ್ಟು ಆಧ್ವಾನವಾಗಿಬಿಟ್ಟಿದೆ, ಅವರನ್ನು ನೀವು ಮುಂದುವರಿಸುವುದು ಬೇಡ ಅಂತ ಹೇಳಿದೆವು, ಆದರೂ ಮುಂದುವರಿಸಿದರು, 6 ತಿಂಗಳಿಂದ ನೌಕರರು ಬೀದಿಯಲ್ಲಿದ್ದಾರೆ. 250 ಕುಟುಂಬಗಳು ಬೀದಿ ಪಾಲಾಗಿವೆ ಇವತ್ತು ಮೈಸೂರಿನಲ್ಲಿ, ಈ ಸರ್ಕಾರ, ಹಿಂದಿನ ಸರ್ಕಾರಗಳೂ ಸಹ ಗಮನ ಕೊಡಲಿಲ್ಲ. ನಾವು 6 ತಿಂಗಳ ಹಿಂದೆ ತೀರ್ಮಾನ ಮಾಡಿದೆವು. ಆ ತೀರ್ಮಾನವನ್ನು ಜಾರಿ ಮಾಡಬೇಕಾದಂತಹವರು ಆ ತೀರ್ಮಾನ ಜಾರಿ ಮಾಡದ ಹಾಗೆ ಸಬಟೇಜ್ ಮಾಡಿದರು. ಇವತ್ತು ಪ್ರತಿಯೊಬ್ಬರೂ ಕಾನೂನು ಅಡ್ಡಿ ಬರುತ್ತದೆ, ಕಾನೂನು ಅಡ್ಡಿ ಬರುತ್ತದೆಂದು ಹೇಳುತ್ತಿದ್ದಾರೆ. ಏನು ಸ್ವಾಮಿ ಶಾಸಕರಿಗೆ ಸಂಬಳ ಜಾಸ್ತಿ ಮಾಡಿಕೊಳ್ಳುವುದಕ್ಕೆ, ಕಾನೂನು ಅಡ್ಡಿ ಬರುವುದಿಲ್ಲ. ಅಧಿಕಾರಿಗಳು ಸಂಬಳ ಜಾಸ್ತಿ ಮಾಡಿಕೊಳ್ಳುವುದಕ್ಕೆ ಕಾನೂನು ಅಡ್ಡಿ ಬರುವುದಿಲ್ಲ. ಪಾಪ, ನೌಕರರು ದುಡಿಯತಕ್ಕಂಥವರು, ಅವರು ಇಲ್ಲದಿದ್ದರೆ ಯುನಿವರ್ಸಿಟಿ ನಡೆಯುವುದಿಲ್ಲ. ಅವರೇನು ಲಕ್ಷಾಂತರ ರೂಪಾಯಿ ಸಂಬಳ ಕೇಳಲಿಲ್ಲ. ನಮಗೆ ಕೊಡುತ್ತಿರುವಂತಹ ಕೂಲಿ ಸಾಕಾಗುವುದಿಲ್ಲ ಸ್ವಲ್ಪ ಜಾಸ್ತಿ ಕೊಡಿ ಅಂತ ನಾವು ತೀರ್ಮಾನ ಮಾಡಿದರೆ ಅದನ್ನು ಕೊಡಲಿಕ್ಕೆ ಈ ಅಧಿಕಾರಿಗಳು ಅವರೆಲ್ಲಾ ಸೇರಿಕೊಂಡು ಅಡ್ಡ ಹಾಕುತ್ತಿದ್ದಾರೆ. ಸರ್ಕಾರ ಏನೂ ಕೊಡಬೇಕಾಗಿಲ್ಲ. ಯೂನಿವರ್ಸಿಟಿ ಹಣ ಅದು. ಯೂನಿವರ್ಸಿಟಿಗೆ ಬಡ್ಡಿ ಬರುತ್ತದೆ. ಅದರಲ್ಲಿ ಕೊಡಿ ಅಂತ ಕೇಳಿದರೂ ಕೊಡಲಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ. ಇವರ ಹತ್ತಿರ ಸಹ ನಾವು ಸುಮಾರು ಸಲ ಮಾತನಾಡುತ್ತಿದ್ದೇವೆ. ನಾನು ಪರಿಹಾರ ಮಾಡುತ್ತೇನೆಂದು ಹೇಳುತ್ತಲೇ

ಇದ್ದಾರೆ. ಇವತ್ತಿಗೂ ಪರಿಹಾರ ಆಗಲಿಲ್ಲ. 6 ತಿಂಗಳಿಂದ ಅವರು ಬೀದಿಯಲ್ಲಿದ್ದಾರೆ. ಹೋರಾಟ ಮಾಡುತ್ತಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಈ ಹಿಂದೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸರ್ಕಾರದ ಪರವಾಗಿ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಟ್ಟರು, ಇವತ್ತೇ ತೀರ್ಮಾನ ಮಾಡಿಬಿಡುತ್ತೇವೆಂದು ಆಶ್ವಾಸನೆ ಕೊಟ್ಟವರು 4 ತಿಂಗಳಾಯಿತು. ಅವರ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಬೇಕಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಇದೇ ಸದನದಲ್ಲಿ ಕೊಟ್ಟಂತಹ ಆಶ್ವಾಸನೆ ಅದು. ಆದ್ದರಿಂದ ದಯವಿಟ್ಟು ಸ್ಪಷ್ಟವಾಗಿ ಏನಾದರೂ ಒಂದು ತೀರ್ಮಾನ ಹೇಳಬೇಕು. ನೀವು ಏನೂ ಮಾಡಬೇಡಿ, ಬಿಒಎಂ ಮಾಡಿರತಕ್ಕಂಥ ತೀರ್ಮಾನವನ್ನು ಜಾರಿ ಮಾಡಿ ಅಂತ ಆದೇಶ ಮಾಡಿ ಸಾಕು. ಹಾಗೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ): ಮಾನ್ಯ ಅಧ್ಯಕ್ಷರೇ, ಸುಮಾರು 8–10 ತಿಂಗಳಿಂದ ನೌಕರರು ಅಲ್ಲಿ ಕೆಲಸ ಮಾಡುವುದಕ್ಕೆ ಒಳಗಡೆ ಬಿಟ್ಟಿಲ್ಲ. ಪಾಪ ಸ್ಟ್ರೈಕ್ ಮಾಡುವುದಕ್ಕೆ ಹೋಗಿ ಪ್ರಾಣ ಹೋಗುತ್ತೇ ಅಂದರೂ ಕೂಡ ಅಲ್ಲಿನ ವೈಸ್ ಚಾನ್ಸಲರ್ ಎಂತಹವರು ಅಂದರೆ ಕಾರು ಕೊಡುವುದಕ್ಕೂ ಹಿಂದೆ ಮುಂದೆ ನೋಡಿದವರು, ಅವರು ಸತ್ತರೆ ಸಾಯಲಿ ಅಂತ. ಸರ್ಕಾರ ಮಾಡಿತೋ ಅಥವಾ ರಾಜ್ಯಪಾಲರು ಮಾಡಿದರೋ ಗೊತ್ತಿಲ್ಲ. ಅವರಿಗೆ ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಟ್ಟಾಗ ಪಟಾಕಿ ಹೊಡೆಸಿಕೊಂಡು ಆ ಯುನಿವರ್ಸಿಟಿ ಒಳಗಡೆ ಸ್ಟ್ರೈಕ್ ಮಾಡುವ ಹುಡುಗರ ಎದುರುಗಡೆ ಕೇಕೇ ಹಾಕಿಕೊಂಡು ಕುಣಿದಾಡಿದ್ದಾರೆ. ಹಿಂದೆ ನಾಗುಗಳು ಅಂತ ಇದ್ದರು ಅಂತ ಹೇಳುತ್ತಾರಲ್ಲಾ ರೋಮ್ ನಗರದಲ್ಲಿ; ಆ ತರಹದ ಸಂಸ್ಕೃತಿ ನಡೆಯುತ್ತಿದೆ ವಿಶ್ವವಿದ್ಯಾನಿಲಯದಲ್ಲಿ, ಇದು ವಿಶ್ವವಿದ್ಯಾನಿಲಯದಲ್ಲಿ ನಡೆಯಬಾರದು. ಏಕೆಂದರೆ ಆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಂದು ಸಲ ಮಾನ್ಯ ಬಿ ಡಿ ಜತ್ತಿಯವರು ಬಂದಿದ್ದರು. ಆಗ ನಾನೂ ಕೂಡ ನನ್ನ ಕಣ್ಣಲ್ಲಿ ನೋಡಿದೆ, ಅವರು ಆಗ ಪ್ರಾರಂಭ ಮಾಡಿದ್ದು ಬಹಳ ಘನ ಉದ್ದೇಶದಿಂದ. ಅಲ್ಲಿ ಪಾಠ ಪ್ರವಚನಗಳು ಸರಿಯಾಗಿ ಕಲಿಸುತ್ತಿಲ್ಲ. ಪರೀಕ್ಷೆಗಳು ಸರಿಯಾಗಿ ಮಾಡುತ್ತಿಲ್ಲ. ಸರ್ಕಾರಕ್ಕೆ ಇದರಿಂದ ಯಾವುದೇ ಹೊರೆಯಾಗುವುದಿಲ್ಲ. 4–5 ವರ್ಷಗಳಿಂದ ಆ ಹುಡುಗರು ಪ್ರತಿ ವರ್ಷ ಅವರು 10 ಕೋಟಿ ರೂಪಾಯಿ ಸಂಪಾದನೆ ಮಾಡಿದ್ದಾರೆ ಅವರು ಮಾಡಿದ ದುಡ್ಡನ್ನು ಅವರಿಗೆ ಕೊಡಲಿಕ್ಕೆ ಏನು ತೊಂದರೆ? ಅವರ ಮಕ್ಕಳು ಮರಿಗಳನ್ನು ಸಾಕಲಿಕ್ಕೆ ಒಂದು ಮಿನಿಮಮ್ ವೇಜ್‌ನ್ನು ಹೆಚ್ಚು

ಮಾಡಲಿಕ್ಕೆ ಸರ್ಕಾರ ಮನಸ್ಸು ಮಾಡಿ ಬಿಒಎಂನಲ್ಲಿ ತೀರ್ಮಾನ ಮಾಡಿದ್ದೇವೆ. ಅದನ್ನು ಮಾಡಿಕೊಡಬೇಕು ಅಂತ ಹೇಳಿ ನಾನೂ ಕೂಡ ಮಾನ್ಯ ಶ್ರೀರಾಮರೆಡ್ಡಿಯವರು ಏನು ಹೇಳಿದ್ದಾರೆ ಅದನ್ನು ಆಗ್ರಹಿಸುತ್ತೇನೆ.

ಶ್ರೀ ಕೆ. ವೆಂಕಟೇಶ್ (ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೇ, ಏನು ಮಾನ್ಯ ಸದಸ್ಯರಾದ ಶ್ರೀ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ; ಆ ಬಗ್ಗೆ ಮಾನ್ಯ ಕಂದಾಯ ಸಚಿವರು ಹಿಂದೆ ಸದನದಲ್ಲಿ ಏನು ಹೇಳಿದ್ದಾರೆ ಅದು ಆಗಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕೂಡಲೇ ಸಂಬಂಧಪಟ್ಟವರಿಗೆ ಆದೇಶ ನೀಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಸುನಿತಾ ವೀರಪ್ಪಗೌಡ (ಬನ್ನೂರು): ಮಾನ್ಯ ಅಧ್ಯಕ್ಷರೇ, ಕಳೆದ 4 ವರ್ಷಗಳಿಂದ ಏನೂ ಮಾಡಿಲ್ಲವೆಂದು ಅವರು ಒಪ್ಪಿಕೊಂಡಿದ್ದರು. ಈ ದಿನವೇ ತಾವು ಅನೌನ್ಸ್ ಮಾಡಬೇಕು. ತಾವು ಏನಾದರೂ ಅಂದುಕೊಳ್ಳಿ. ಈ ದಿನವೇ ತೀರ್ಮಾನ ಮಾಡುತ್ತೇನೆಂದು ಹೇಳಿ ಇದುವರೆಗೂ ಆಗಿಲ್ಲ. ಅವರು ಬೀದಿಗೆ ಬಿದ್ದಿದ್ದಾರೆ. ದಯಮಾಡಿ ಇದಕ್ಕೆ ಏನಾದರೂ ಉತ್ತರ ಕೊಡಬೇಕು ಸರ್ಕಾರ.

ಶ್ರೀ ಹೆಚ್. ಆಂಜನೇಯ (ಭರಮಸಾಗರ): ಮಾನ್ಯ ಅಧ್ಯಕ್ಷರೇ, ಅವರು ಬಹಳ ವರ್ಷಗಳಿಂದ ದುಡಿಯುತ್ತಿದ್ದಾರೆ. ಅವರಿಗೆ ವಯೋಮಿತಿ ಕೂಡ ಮೀರುತ್ತಿದೆ. ಅವರಿಗೆ ಕನಿಷ್ಟ ಸಂಬಳ ಕೂಡ ಇಲ್ಲ ಅವರು ಜೀತದಾಳುಗಳಂತೆ ಅವರು ಆ ಯುನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರನ್ನೂ ಕೂಡ ತಾವು ಖಾಯಂ ಮಾಡಲಿಕ್ಕೇ ಬೇಕು. ಅಲ್ಲಿ ಬಡವರು, ದಲಿತರು ರೈತರು ಅವರ ಮಕ್ಕಳೆಲ್ಲಾ ಇದ್ದಾರೆ. ರೈತರ ಮಕ್ಕಳಿಗೆ ಉಪಕಾರ ಮಾಡಿದಂತೆ ಆಗುತ್ತದೆ. ಅವರು ಸುಮಾರು 50 ಪರ್ಸೆಂಟ್ ಇದ್ದಾರೆ. ಅಂಥವರಿಗೆ ಉಪಕಾರ ಮಾಡಬೇಕೆಂದು ನಾನೂ ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ (ಸಂತೆಮಾರಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಏನು ಹೇಳಿದ್ದಾರೆ ಅದರಂತೆ ಅವರೆಲ್ಲಾ ನಿರುದ್ಯೋಗಿಗಳು ಅವರು ಬೀದಿಪಾಲಾಗಿದ್ದಾರೆ ಅವರು ಕಂಗಾಲಾಗಿದ್ದಾರೆ. ದಯಮಾಡಿ ಅವರ ಕಷ್ಟಕ್ಕೆ ತಾವು ಧಾವಿಸಬೇಕು ಅಂತ ಹೇಳಿ ನಾನು ಮಾನ್ಯ ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಸದನದ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ. ಅದರಲ್ಲೂ ಮೈಸೂರು ವಿಶ್ವವಿದ್ಯಾನಿಲಯದ ವಿಷಯದಲ್ಲಿ ಹಲವಾರು ವರ್ಷಗಳಿಂದ ಈ

ಸಮಸ್ಯೆಯನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರಿಗೆ, ಮಾನ್ಯ ಪುಟ್ಟೇಗೌಡರಿಗೆ ಹಾಗೂ ಧ್ರುವನಾರಾಯಣ್ ರವರಿಗೆ ನನ್ನಿಂದಲೇ ಉತ್ತರ ಬೇಕು, ಅದರಿಂದ ಅವರಿಗೆ ಏನೂ ಅನುಕೂಲವಾಗಬಹುದು ಎಂದು ಮತ್ತೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬೆಳಿಗ್ಗೆನೇ ಈ ಪ್ರಶ್ನೆಯನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಆದಷ್ಟು ಬೇಗ, ಆದಷ್ಟು ಬೇಗ ಅಂದರೆ ಮತ್ತೆ ನೀವು ಎದ್ದು ನಿಂತು ಏನಾದರೂ ಕೇಳಬಹುದು. ಅದಕ್ಕೆ ಮುಂದಿನ 15–20 ದಿವಸಗಳಲ್ಲಿ ಇದಕ್ಕೆ ನಾನು ಅಂತಿಮ ಇತಿಶ್ರೀಯನ್ನು ಹಾಡುವುದರ ಮುಖಾಂತರ ಈ ಸಮಸ್ಯೆಯನ್ನು ಬಗೆಹರಿಸಿ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಿಓಎಂ ತೀರ್ಮಾನವನ್ನು ಜಾರಿ ಮಾಡಿ ಎಂದು ಹೇಳಿಬಿಡಿ, ಬೇರೆ ಏನೂ ಉತ್ತರ ಬೇಡ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಈ ವಿಷಯದ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನನ್ನ ಗಮನಕ್ಕೆ ತಂದಿದ್ದಾರೆ, ನಾವು ಕ್ರಮ ತೆಗೆದುಕೊಂಡಿದ್ದೇವೆ. ಇನ್ನು 10–15 ದಿವಸದೊಳಗೆ ತೀರ್ಮಾನ ಮಾಡಿ ಕೊಡುತ್ತೇವೆ.

5. ನಿಯಮ 69ರ ಮೇಲೆ ಮುಂದುವರಿದ ಚರ್ಚೆ

ವಿಷಯ: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ಇವತ್ತು ವಿಶ್ವದ್ಯಾಂತ ಬೆಂಗಳೂರು ಮೈಸೂರು ಕಾರಿಡಾರ್ ಬಗ್ಗೆ ಚರ್ಚೆಯಾಗುತ್ತಿದೆ. ಎಲ್ಲೆಡೆ ರಸ್ತೆಗಳಿಂದ ಹಿಡಿದು ಮಾಧ್ಯಮಗಳಲ್ಲಿ ಇದರ ಬಗ್ಗೆ ವಿಶೇಷವಾದ ಚರ್ಚೆಯಾಗುತ್ತಿದೆ. ಈ ಒಂದು ಸದನದ ಸದಸ್ಯನಾಗಿ ಬಹುಶಃ ಈ ಘಟನಾವಳಿಗಳು ಸಂಭವಿಸುವ ಸಂದರ್ಭದಲ್ಲಿ ನಾನು ಈ ಸದನದ ಸದಸ್ಯನಾಗಿಲ್ಲದೆ ಇರತಕ್ಕಂಥ ಒಂದು ಹಿನ್ನೆಲೆಯಲ್ಲಿ ಈಗ ಸದಸ್ಯನಾಗಿ ನಾನು ಬಹಳ ಕುತೂಹಲದಿಂದ ಈ ಚರ್ಚೆಯನ್ನು ಕೇಳಿದ್ದೇನೆ. ಮಾಧ್ಯಮಗಳಲ್ಲಿ ನೋಡಿದ್ದೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ ಬಹುಶಃ ಹಿಂದೆ ಡಿಮ್ಯಾಂಡ್ ಮಾಡಿದರು ಒಂದು ಶ್ವೇತಪತ್ರ ಕೊಡಬೇಕು ಇದರ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಸದಸ್ಯರಿಗೆ ಕೊಡಬೇಕು, ಆಗ ಚರ್ಚೆ ಮಾಡಲಿಕ್ಕೆ ಸುಲಲಿತವಾಗುತ್ತದೆಂದು ಹೇಳಿದಾಗ ಬಹುಶಃ ಅವರು ಹೇಳಿದರು ರೈಟ್ ಟು ಇನ್‌ಫರ್‌ಮೇಶನ್‌ನಿಂದ ಪ್ರೊಕ್ಯೂರ್ ಮಾಡಿಕೊಳ್ಳಬಹುದು ಅಂತ. ಅದರೂ ನಮಗೆ ಇರತಕ್ಕಂಥ ಮೂಲಗಳ ಮುಖೇನ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿ ಅವಲೋಕನ ಮಾಡಿದಾಗ ನಿಜವಾಗಲೂ ನನಗೆ